Presented on : 09-12-2024
Registered on : 09-12-2024
Decided on : 24-06-2026
Duration : 1 years 6 months 15 days

**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಜೇವರಗಿ.**

**ದಿನಾಂಕ : 24 ನೇ ಜೂನ್ ಮಾಹೆಯ 2026.**

ಉಪಸ್ಥಿತರುಃ ಶ್ರೀಮತಿ ತಯ್ಯಬಾ ಸುಲ್ತಾನಾ. ಬಿ.ಎ.ಎಲ್.ಎಲ್.ಬಿ,
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಜೇವರಗಿ.

## ಅಪರಾಧಿಕ ಪ್ರಕರಣ ಸಂಖ್ಯೆಃ 280/2024

ಫಿರ್ಯಾದಿದಾರರುಃ

ರಾಜ್ಯ ಸರ್ಕಾರದ ಪರ ಜೇವರಗಿ ಪೊಲೀಸರು
ಜೇವರಗಿ ಪೊಲೀಸ ಠಾಣೆ,
(ಪರ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರುಃ

1. ಬಾಬು @ ಬಾಬಾಸಾಬ ತಂದೆ ಹೈಯಾಳಪ್ಪ ಪೂಜಾರಿ,
ವಯಸ್ಸು: 35 ವರ್ಷ, ಉ: ಕೂಲಿ ಕೆಲಸ,
ವಾಸಾ: ಕೋನ ಹಿಪ್ಪರಗಾ ಗ್ರಾಮ,
ಹಾಲಿ ವಸತಿ: ರೇವನೂರ, ತಾ: ಜೇವರ್ಗಿ,
ಜಿ: ಕಲಬುರಗಿ.

2. ಗೌರಮ್ಮ ಗಂಡ ಬಾಬು @ ಬಾಬಾಸಾಬ ಪೂಜಾರಿ,
ವಯಸ್ಸು: 30 ವರ್ಷ, ಉ: ಮನೆ ಕೆಲಸ,
ವಾಸಾ: ಕೋನ ಹಿಪ್ಪರಗಾ ಗ್ರಾಮ,
ಹಾಲಿ ವಸತಿ: ರೇವನೂರ, ತಾ: ಜೇವರ್ಗಿ,
ಜಿ: ಕಲಬುರಗಿ.

3. ಮಲ್ಕಪ್ಪ ತಂದೆ ಸಿದ್ದಪ್ಪ ಸಾಥಖೇಡ,
ವಯಸ್ಸು: 45 ವರ್ಷ, ಉ: ಒಕ್ಕಲುತನ ಕೆಲಸ,
ವಾಸ: ರೇವನೂರ, ತಾ: ಜೇವರ್ಗಿ,
ಜಿ: ಕಲಬುರಗಿ.

4. ಶರಣಪ್ಪ ತಂದೆ ರೇವಣ್ಣಸಿದ್ದಪ್ಪ,
ಸಾ: ಕವಲಗಾ (ಕೆ), ತಾ: ಜಿ: ಕಲಬುರಗಿ.

5. ಯಲ್ಲಪ್ಪ ತಂದೆ ಸಾಯಬಣ್ಣ ಗೋಟೂರ,
ಸಾ: ಕವಲಗಾ (ಕೆ), ತಾ: ಜಿ: ಕಲಬುರಗಿ.

6. ಬೀರಪ್ಪ ತಂದೆ ಬಸಣ್ಣ,
ಸಾ: ಕೊಳ್ಳೂರ ಗ್ರಾಮ, ತಾ: ಜಿ: ಕಲಬುರಗಿ.

(ಆರೋಪಿತರ ಪರ ಶ್ರೀ ಎಮ್.ಎಸ್.ಬಿ., ವಕೀಲರು)

**ತೀರ್ಪು**

1. ಜೇವರಗಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.447, 427, 109, 504 ಮತ್ತು 506 ಸಹ ಕಲಂ.149 ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇದೆಃ**

ಜೇವರ್ಗಿ ಪೊಲೀಸ್ ಠಾಣೆ ಸರಹದ್ದಿಯ ಪೈಕಿ ಕೋನ ಹಿಪ್ಪರಗಾ ಗ್ರಾಮದ ಸೀಮಾಂತರದಲ್ಲಿ ಚಾಸಾ.5 ನೇದ್ದವರ ಹೆಸರಿನಲ್ಲಿರುವ ಹೊಲ ಸರ್ವೆ ನಂ.41/5 ನೇದ್ದರಲ್ಲಿನ 2 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಚಾಸಾ.5 ಮತ್ತು 1 ನೇ ಆರೋಪಿಯ ಮಧ್ಯೆ ಈಗ ಕೆಲವು ವರ್ಷಗಳಿಂದ ತಕರಾರು ನಡೆದಿದ್ದು, ಈ ಮೊದಲು ಅಂದರೆ 2 ತಿಂಗಳ ಹಿಂದೆ ಚಾಸಾ.5 ಮತ್ತು ಅವರ ಮನೆಯವರಿಗೆ, 1 ನೇ ಆರೋಪಿಯು ಸದರಿ ಹೊಲದ ಸಾಗುವಳಿ ವಿಷಯದಲ್ಲಿ ತಕರಾರು ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಜೀವದ ಬೆದರಿಕೆ ಹಾಕಿ ಹೋಗಿದ್ದು, ಅಲ್ಲದೇ ದಿನಾಂಕ 02-11-2023 ರಂದು ರಾತ್ರಿ 10.00 ಗಂಟೆಯಿಂದ ದಿನಾಂಕ 03-11-2023 ಮುಂಜಾನೆ 06.00 ಗಂಟೆಯ ಮಧ್ಯದ

ಅವಧಿಯಲ್ಲಿ 1 ರಿಂದ 3 ನೇ ಆರೋಪಿತರು 4 ರಿಂದ 6 ನೇ ಆರೋಪಿತರ ಕುಮ್ಮಕ್ಕಿನಿಂದ ಹೊಲ ಸರ್ವೆ ನಂ.41/5 ನೇದ್ದರಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ಹೊಲದಲ್ಲಿನ ಒಂದರಿಂದ ಒಂದುವರೆ ಎಕರೆಯಷ್ಟು ಭೂಮಿಯಲ್ಲಿ ಬೆಳೆದ ಸುಮಾರು 4 ತಿಂಗಳ ಹತ್ತಿ ಬೆಳೆಯನ್ನು, ಎತ್ತಿನ ಗಳೆಯಿಂದ ಹರಗಿ ನಾಶ ಮಾಡಿದ್ದು, ಇದರಿಂದ ಚಾಸಾ.1 ಮತ್ತು ಅವರ ಮನೆಯವರಿಗೆ ಅ.ಕಿ. 60,000/- ರೂ ಕಿಮ್ಮತ್ತಿನಷ್ಟು ಹತ್ತಿ ಬೆಳೆ ನಷ್ಟ ಆಗಿದ್ದು ಇರುತ್ತದೆ. ಕಾರಣ ಭಾರತೀಯ ದಂಡ ಸಂಹಿತೆ ಕಲಂ.447, 427, 109, 504 ಮತ್ತು 506 ಸಹ ಕಲಂ.149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಚಾಸಾ.1 ರವರು ಆರೋಪಿತರ ವಿರುದ್ದ ನೀಡಿದ ಫಿರ್ಯಾದಿ ಅನ್ವಯ ಜೇವರಗಿ ಪೊಲೀಸರು ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣಾ ಪತ್ರವನ್ನು ಪರಿಶೀಲಿಸಿ ನ್ಯಾಯಾಲಯವು ಆರೋಪಿತರ ವಿರುದ್ಧ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡು ಆರೋಪಿತರ ಹಾಜರಾತಿ ಪಡೆದು, ದೋಷಾರೋಪಣ ಪತ್ರದ ನಕಲನ್ನು ಆರೋಪಿತರಿಗೆ ಒದಗಿಸಿ, ದಂ. ಪ್ರ. ಸಂ. ಕಲಂಃ 207 ರ ಷರತ್ತನ್ನು ಪಾಲನೆ ಮಾಡಲಾಯಿತು, ಆಪಾದನೆಗಳನ್ನು ರಚಿಸಿ ಓದಿ ಹೇಳಿದಾಗ, ಆರೋಪಿತರು ತಾವು ತಪ್ಪು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

4. ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವ ಅಪರಾಧವನ್ನು ಆರೋಪಿತರು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು ಒಟ್ಟು 14 ಜನ ಸಾಕ್ಷಿದಾರರಲ್ಲಿ 1 ಸಾಕ್ಷಿದಾರನನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿ 1

ದಾಖಲೆಗಳನ್ನು ನಿಪಿ.1 ಎಂದು ನಿಶಾನೆಕರಿಸಿಕೊಂಡಿದೆ.

5. ಅಪರಾಧಿಕ ಪ್ರ.ಸಂ.ಕಲಂ.313 ರ ಅಡಿಯಲ್ಲಿ ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯ ಇಲ್ಲದ ಕಾರಣ ಅವರ ಹೇಳಿಕೆಗಳನ್ನು ವಿನಾಯತಿಗೊಳಿಸಿದೆ.

6. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು ಮತ್ತು ಕಡತಗಳನ್ನು ಪರಿಶಿಲಿಸಲಾಯಿತು.

7. ಈ ಮೇಲಿನ ಮೊಕದ್ದಮೆಯಲ್ಲಿ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳು ಈ ಕೆಳಕಂಡಂತಿದೆ.

**<u>ಅಂಶಗಳು</u>**

1. ದಿನಾಂಕಃ 02-11-2023 ರಂದು ರಾತ್ರಿ 10.00 ಗಂಟೆಯಿಂದ ದಿನಾಂಕ 03-11-2023 ರಂದು ಬೆಳಿಗ್ಗೆ 06.00 ವರೆಗಿನ ಅವಧಿಯಲ್ಲಿ ಜೇವರ್ಗಿ ಪೋಲಿಸ ಠಾಣಾ ವ್ಯಾಪ್ತಿಯ ಕೋನ ಹಿಪ್ಪರಗಾ ಗ್ರಾಮದ ಸೀಮಾಂತರದ ಚಾಸಾ.5 ರವರ ಜಮೀನು ಸ.ನಂ.41/5 ರ 2 ಎಕರೆ 10 ಗುಂಟೆ ಜಮೀನಿನಲ್ಲಿ 1 ರಿಂದ 3 ನೇ ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ.5 ರವರೊಂದಿಗೆ ಹೊಲದ ವಿಚಾರವಾಗಿ ಜಗಳ ತೆಗೆದು, ಚಾಸಾ.5 ರವರ ಜಮಿನಿನಲ್ಲಿ ಅಕ್ರಮ ಪ್ರವೇಶ ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

2. ಮೇಲೆ ಹೇಳಿದ, ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಚಾಸಾ.5 ರವರೊಂದಿಗೆ ಹೊಲದ ವಿಚಾರವಾಗಿ ಜಗಳ ತೆಗೆದು, 1 ರಿಂದ 3 ನೇ ಆರೋಪಿತರು ಎತ್ತಿನ ಗಳೆಯಿಂದ ಚಾಸಾ.5 ರವರ ಜಮೀನು ಸ.ನಂ.41/5 ರ 2 ಎಕರೆ 10 ಗುಂಟೆ ಜಮೀನಿನಲ್ಲಿ ಬೆಳೆದಿದ್ದ ಹತ್ತಿ ಬೆಳೆಯನ್ನು ಹಾಳು ಮಾಡಿ ಚಾಸಾ.5 ರವರಿಗೆ ಅಂದಾಜು ರೂ.60,000/- ರೂಪಾಯಿ ಹಾನಿವುಂಟು ಮಾಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

3. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಮೇಲೆ ಹೇಳಿದ ವಿಚಾರವಾಗಿ ಚಾಸಾ.5 ರವರೊಂದಿಗೆ ಜಗಳ ತೆಗೆದು 4 ರಿಂದ 6 ನೇ ಆರೋಪಿತರು ಸ.ನಂ.41/5 ರಲ್ಲಿ ಬೆಳೆದಿದ್ದ ಬೆಳೆಯನ್ನು ನಾಶ ಮಾಡುವಂತೆ 1 ರಿಂದ 3 ನೇ ಆರೋಪಿತರಿಗೆ ಕುಮ್ಮಕ್ಕು ಹಾಗೂ ಪ್ರಚೋದನೆ ನೀಡಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 109 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

4. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು,

ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಮೇಲೆ ಹೇಳಿದ ವಿಚಾರವಾಗಿ ಚಾಸಾ.5 ರವರೊಂದಿಗೆ ಜಗಳ ತೆಗೆದು, 1 ರಿಂದ 3 ನೇ ಆರೋಪಿತರು ಸ.ನಂ.41/5 ರಲ್ಲಿ ಹತ್ತಿ ಬೆಳೆ ಹಾಳು ಮಾಡುವುದಕ್ಕಿಂತ 2 ತಿಂಗಳ ಹಿಂದೆ ಚಾಸಾ.5 ರವರ ಮನೆಗೆ ಬಂದು ಒಂದು ಎಕರೆ ಜಮೀನು ತನ್ನ ಹೆಸರಿಗೆ ಇದೆ ಅದನ್ನು ಏಕೆ ಸಾಗುವಳಿ ಮಾಡಿದ್ದೀರಿ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು, ನಿಂದಿಸಿ ಅವಮಾನವನ್ನುಂಟು ಮಾಡಿ ಚಾಸಾ.5 ರವರು ಸಮಾಜದ ಶಾಂತಿಯನ್ನು ಕೆಡಿಸುವಂತೆ ಚಾಸಾ.5 ರವರನ್ನು ಉದ್ರೇಕಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸಿರುವುದೇ?

5. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು, ಆರೋಪಿತರು ಅಪರಾಧ ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು ಮೇಲೆ ಹೇಳಿದ ವಿಚಾರವಾಗಿ ಚಾಸಾ.5 ರವರೊಂದಿಗೆ ಜಗಳ ತೆಗೆದು, 1 ರಿಂದ 3 ನೇ ಆರೋಪಿತರು ಚಾಸಾ.5 ರವರಿಗೆ ಜೀವ ಬೆದರಿಕೆ ಹಾಕಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತುಪಡಿಸಿರುವುದೇ?

6. ಯಾವ ಆದೇಶ?

8. ಮೇಲೆ ಹೇಳಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

| | | |
|---|---|---|
| ಅಂಶ 1 | : | ನಕಾರಾತ್ಮಕ |
| ಅಂಶ 2 | : | ನಕಾರಾತ್ಮಕ |
| ಅಂಶ 3 | : | ನಕಾರಾತ್ಮಕ |
| ಅಂಶ 4 | : | ನಕಾರಾತ್ಮಕ |
| ಅಂಶ 5 | : | ನಕಾರಾತ್ಮಕ |
| ಅಂಶ 6 | : | ಅಂತಿಮ ಆದೇಶ ಈ ಕೆಳಕಂಡಂತೆ ಕಾರಣಗಳು. |

**:<u>ಕಾರಣಗಳು</u>:**

9. **<u>ಅಂಶ-1 ರಿಂದ 5:</u>** ಈ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿದ್ದು ಸಂದರ್ಭ ಮತ್ತು ಸನ್ನಿವೇಶಗಳನ್ನು ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಒಟ್ಟಿಗೆ ಪರಿಗಣಿಸಲಾಯಿತು.

10. ಅಭಿಯೋಜನೆಯ ಪ್ರಕಾರ ಜೇವರ್ಗಿ ಪೊಲೀಸ್ ಠಾಣೆ ಸರಹದ್ದಿಯ ಪೈಕಿ ಕೋನ ಹಿಪ್ಪರಗಾ ಗ್ರಾಮದ ಸೀಮಾಂತರದಲ್ಲಿ ಚಾಸಾ.5 ನೇದ್ದವರ ಹೆಸರಿನಲ್ಲಿರುವ ಹೊಲ ಸರ್ವೆ ನಂ.41/5 ನೇದ್ದರಲ್ಲಿನ 2 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಚಾಸಾ.5 ಮತ್ತು 1 ನೇ ಆರೋಪಿಯ ಮಧ್ಯೆ ಈಗ ಕೆಲವು ವರ್ಷಗಳಿಂದ ತಕರಾರು ನಡೆದಿದ್ದು, ಈ ಮೊದಲು ಅಂದರೆ 2 ತಿಂಗಳ ಹಿಂದೆ ಚಾಸಾ.5 ಮತ್ತು ಅವರ ಮನೆಯವರಿಗೆ, 1 ನೇ ಆರೋಪಿಯು ಸದರಿ ಹೊಲದ ಸಾಗುವಳಿ ವಿಷಯದಲ್ಲಿ ತಕರಾರು ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಜೀವದ ಬೆದರಿಕೆ ಹಾಕಿ ಹೋಗಿದ್ದು, ಅಲ್ಲದೇ ದಿನಾಂಕ 02-11-2023 ರಂದು ರಾತ್ರಿ 10.00 ಗಂಟೆಯಿಂದ ದಿನಾಂಕ 03-11-2023 ಮುಂಜಾನೆ 06.00 ಗಂಟೆಯ ಮಧ್ಯದ ಅವಧಿಯಲ್ಲಿ 1 ರಿಂದ 3 ನೇ ಆರೋಪಿತರು 4 ರಿಂದ 6 ನೇ ಆರೋಪಿತರ ಕುಮ್ಮಕ್ಕಿನಿಂದ ಹೊಲ ಸರ್ವೆ ನಂ.41/5 ನೇದ್ದರಲ್ಲಿ ಅಕ್ರಮವಾಗಿ ಪ್ರವೇಶ

ಮಾಡಿ ಹೊಲದಲ್ಲಿನ ಒಂದರಿಂದ ಒಂದುವರೆ ಎಕರೆಯಷ್ಟು ಭೂಮಿಯಲ್ಲಿ ಬೆಳೆದ ಸುಮಾರು 4 ತಿಂಗಳ ಹತ್ತಿ ಬೆಳೆಯನ್ನು, ಎತ್ತಿನ ಗಳೆಯಿಂದ ಹರಗಿ ನಾಶ ಮಾಡಿದ್ದು, ಇದರಿಂದ ಚಾಸಾ.1 ಮತ್ತು ಅವರ ಮನೆಯವರಿಗೆ ಅ.ಕಿ. 60,000/- ರೂ ಕಿಮ್ಮತ್ತಿನಷ್ಟು ಹತ್ತಿ ಬೆಳೆ ನಷ್ಟ ಆಗಿದ್ದು ಇರುತ್ತದೆ. ಈ ನಿಟ್ಟಿನಲ್ಲಿ ಅಭಿಯೋಜನೆಯ ಪ್ರಾಸಾ.1 ರವರನ್ನು ಸಾಕ್ಷಿ ವಿಚಾರಣೆ ಮಾಡಿಸಿ ಒಂದು ದಾಖಲೆಯನ್ನು ನಿಪಿ.1 ಎಂದು ನಿಶಾನೆಕರಿಸಿಕೊಂಡಿರುತ್ತಾರೆ.

11. ಅಭಿಯೋಜನೆಯು ಚಾಸಾ.1 ರವರನ್ನು ಪ್ರಾಸಾ.1 ರಂತೆ ವಿಚಾರಣೆ ಮಾಡಿದ್ದು, ಸದರಿಯವರು ಪಿರ್ಯಾದಿದಾರರು ಆಗಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ, 1 ನೇ ಆರೋಪಿ ತನ್ನ ಚಿಕ್ಕಪ್ಪನ ಮಗ ಎಂದು, 2 ನೇ ಆರೋಪಿ ಚಿಕ್ಕಪ್ಪನ ಸೊಸೆ ಎಂದು, 3 ರಿಂದ 6 ನೇ ಆರೋಪಿತರು ನಮ್ಮ ಸಂಬಂಧಿಕರಾಗಬೇಕು ಎಂದು ನುಡಿದಿರುತ್ತಾರೆ. ತನ್ನ ಮತ್ತು ಆರೋಪಿತರ ಮಧ್ಯೆ ಸಣ್ಣ ಪುಟ್ಟ ಬಾಯಿ ಮಾತಿನ ಜಗಳ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಅತಿಕ್ರಮ ಪ್ರವೇಶ ಮಾಡಿ ಬೆಳೆಗಳನ್ನು ಹಾಳು ಮಾಡಿಲ್ಲ ಜೀವದ ಬೆದರಿಕೆ ಹಾಕಿಲ್ಲ ಎಂದು ನುಡಿದಿರುತ್ತಾರೆ. ನಿಪಿ.1 ರ ದಾಖಲೆಗೆ 2 ವರ್ಷಗಳ ಹಿಂದೆ ತಾನು ಪೋಲೀಸ್ ಠಾಣೆಗೆ ಹೋದಾಗ ನಿಪಿ.1 ರ ಮೇಲೆ ತನ್ನ ಸಹಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ.1 ದೂರಿನಲ್ಲಿ ಬರೆದಂತಹ ವಿಚಾರಗಳು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪೊಲೀಸರು ತನ್ನ ಸಮಕ್ಷಮ ಯಾವುದೇ ಗುನ್ನ ಸ್ಥಳದ ಪಂಚನಾಮೆ ಮಾಡಿಲ್ಲ ಎಂದು ನುಡಿದ ಕಾರಣ ಸದರಿ ಸಾಕ್ಷಿದಾರರನ್ನು ಅಭಿಯೋಜನೆಯು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಮಾಡಿದಂತಹ ಪಾಟೀ ಸವಾಲಿನಲ್ಲಿನ ಸಲಹೆಗಳನ್ನು ಸದರಿ ಸಾಕ್ಷಿಯು ನಿರಾಕರಿಸಿರುತ್ತಾರೆ. ಪ್ರಾಸಾ.1 ರವರು ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿದ ನಂತರ ಅಭಿಯೋಜಕರು

ಸದರಿ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹ ಅಭಿಯೋಜಕರ ಪ್ರಕರಣಕ್ಕೆ ಪೂರಕವಾದಂತಹ ಯಾವುದೇ ಅಂಶವನ್ನು ಹೊರತರಲು ಸಾಧ್ಯವಾಗಿಲ್ಲ. ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ.1 ರವರು ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ದೋಷಾರೋಪಣೆ ಪತ್ರದಲ್ಲಿ ಆರೋಪಿಸಿರುವಂತೆ ಆರೋಪಿತರ ವಿರುದ್ದ ಮಾಡಲಾದ ಆರೋಪವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಈ ಪ್ರಕರಣದಲ್ಲಿ ಪ್ರಾಸಾ.1 ರವರು ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿದ್ದರಿಂದ ಇತರೆ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸುವುದರಿಂದ ಯಾವುದೇ ಪ್ರಯೋಜನವಿಲ್ಲ ಎಂದು ಮನಗಂಡು ಇತರೆ ಸಾಕ್ಷಿದಾರರಿಗೆ ಸಮನ್ಸ್ ಹೊರಡಿಸುವುದನ್ನು ಕೈಬಿಡಲಾಯಿತು. ಲಭ್ಯವಿರುವ ಸಾಕ್ಷ್ಯದಾರಗಳನ್ನು ಪರಿಶೀಲಿಸಲಾಗಿ ಅಭಿಯೋಜನೆಯು ಆರೋಪಿತರ ಮೇಲಿನ ದೋಷಾರೋಪಣೆಯನ್ನು ನ್ಯಾಯೋಚಿತ ರೀತಿಯಲ್ಲಿ ಮತ್ತು ಸಂಶಯತೀತವಾಗಿ ರುಜುವಾತುಪಡಿಸುವಲ್ಲಿ ವಿಫಲಗೊಂಡಿದ್ದರಿಂದ ಸದರಿ ಅನುಮಾನದ ಲಾಭವನ್ನು ಆರೋಪಿತರಿಗೆ ನೀಡಿ ಅವರ ಮೇಲೆ ಮಾಡಲಾದ ಆರೋಪಣೆಯಿಂದ ಮುಕ್ತಿಗೊಳಿಸಿ ಬಿಡುಗಡೆಗೊಳಿಸಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟು ಅಂಶ-1 ರಿಂದ 5 ಕ್ಕೆ ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

12. **<u>ಅಂಶ-6 ಕ್ಕೆಃ</u>** ಅಂಶ-1 ರಿಂದ 5 ಕ್ಕೆ ಸಂಬಂಧಪಟ್ಟಂತೆ ಮಾಡಿರುವ ಚರ್ಚೆಯಿಂದ ಆರೋಪಿತರು ಅನುಮಾನದ ಲಾಭವನ್ನು ಪಡೆದು ಬಿಡುಗಡೆ ಹೊಂದಲು ಅರ್ಹರಿರುತ್ತಾರೆ ಎಂದು ಅಭಿಪ್ರಾಯಪಡಲಾಗಿದೆ. ಆದುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**ಆದೇಶ**

ದಂ.ಪ್ರ.ಸಂ.ಕಲಂ.248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ.447, 427, 109, 504 ಮತ್ತು 506 ಸಹ ಕಲಂ.149 ರ ಅಡಿಯಲ್ಲಿ ಮಾಡಿರುವ ಅಪಾದನೆಗಳಿಂದ ನಿರ್ದೋಷಿತರೆಂದು ಘೋಷಿಸಿ ಸದರಿ ಆರೋಪಗಳಿಂದ ದೋಷಮುಕ್ತರನ್ನಾಗಿ ಬಿಡುಗಡೆಗೊಳಿಸಲಾಗಿದೆ.

ಆರೋಪಿತರ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಗಳನ್ನು 06 ತಿಂಗಳ ನಂತರ ರದ್ದುಪಡಿಸಲು ಆದೇಶಿಸಲಾಗಿದೆ.

ದೋಷಾರೋಪಣೆ ಪಟ್ಟಿ ಕಾಲಂ ನಂ.11 ರಲ್ಲಿ ತೋರಿಸಿರುವ ಒಂದು ಹಿಡಿ ಗಾತ್ರದಷ್ಟು ಒಣಗಿದ ಹತ್ತಿ ಗಿಡಗಳು ಇದ್ದುದ್ದು ಇವು ಬೆಲೆ ರಹಿತವಾಗಿರುವುದರಿಂದ ಅಪೀಲು ಅವಧಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದನ್ನು ನಾನು ಓದಿ ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 24 ನೇ ಜೂನ್ ಮಾಹೆಯ 2026 ರಂದು ನನ್ನಿಂದ ಘೋಷಿಸಲಾಯಿತು).

**(ಶ್ರೀಮತಿ ತಯ್ಯಿಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.

**<u>ಅನುಬಂಧ</u>**

**<u>ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿಃ</u>**

ಪ್ರಾಸಾ 1 : ಶಿವಕುಮಾರ ತಂದೆ ಮಲ್ಲಪ್ಪ.

**<u>ಅಭಿಯೋಜನೆ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ</u>**

ನಿಪಿ-1 : ದೂರು.

ನಿಪಿ-1(a) : ಪ್ರಾಸಾ.1 ರವರ ಸಹಿ.

**<u>ಅಭಿಯೋಜನೆ ಪರ ನಿಷಾನೆ ಮಾಡಲಾದ ಮುದ್ದೆ ಮಾಲುಗಳ ಪಟ್ಟಿಃ</u>**

-ಇಲ್ಲ-

**<u>ಆರೋಪಿತರ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿಃ</u>**

-ಇಲ್ಲ-

**<u>ಆರೋಪಿತರ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ</u>**

-ಇಲ್ಲ-

**(ಶ್ರೀಮತಿ ತಯ್ಯಬಾ ಸುಲ್ತಾನಾ)**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಜೇವರಗಿ.